ಕರ್ನಾಟಕ ಸರ್ಕಾರ

# ಅಭ್ಯಾಸ ಪುಸ್ತಕ

## ಭಾಗ - 1

## ವಿಷಯ : ಕನ್ನಡ

## ತರಗತಿ : 5

**ಹೆಸರು :** ...................................................................

**ಶಾಲೆಯ ಹೆಸರು :** ......................................................

**ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ**

ಬನಶಂಕರಿ 3ನೇ ಹಂತ,

ಬೆಂಗಳೂರು - 560 085

# ಅಭ್ಯಾಸ ಪುಸ್ತಕ ರಚನಾ ಸಮಿತಿ

## ಪರಿಕಲ್ಪನೆ

**ಶ್ರೀ ಅಜಯ್ ಸೇಠ್,** ಐ.ಎ.ಎಸ್, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
(ಪ್ರಾ ಮತ್ತು ಪ್ರೌ ಶಿಕ್ಷಣ) ಬೆಂಗಳೂರು

**ಡಾ. ಪಿ.ಸಿ. ಜಾಫರ್,** ಐ.ಎ.ಎಸ್
ರಾಜ್ಯ ಯೋಜನಾ ನಿರ್ದೇಶಕರು,ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ

**ಶ್ರೀಮತಿ ಸೌಜನ್ಯ,** ಐ.ಎ.ಎಸ್
ಸರ್ವ ಶಿಕ್ಷಣ ಅಭಿಯಾನ
ಮಾರ್ಗದರ್ಶನ

## ಮಾರ್ಗದರ್ಶನ

**ಶ್ರೀ ಬೆಳ್ಳಿಶೆಟ್ಟಿ**
ನಿರ್ದೇಶಕರು, ಡಿಎಸ್ಇಆರ್‌ಟಿ

**ಶ್ರೀ ನರಸಿಂಹಯ್ಯ**
ವ್ಯವಸ್ಥಾಪಕ ನಿರ್ದೇಶಕರು, ಕ.ಪ.ಪು.ಸಂ

**ಶ್ರೀಮತಿ ಫಿಲೋಮಿನಾ ಲೋಬೋ**
ನಿರ್ದೇಶಕರು, ಪ್ರೌಢಶಿಕ್ಷಣ

**ಶ್ರೀ ಹೆಚ್.ಎನ್.ಗೋಪಾಲಕೃಷ್ಣ**
ಸಹನಿರ್ದೇಶಕರು, ಡಿಎಸ್ಇಆರ್‌ಟಿ

## ಅಧ್ಯಕ್ಷರು

**ನರಸಿಂಹಮೂರ್ತಿ. ಆರ್.** ವಿಶ್ರಾಂತ ಕನ್ನಡ ಪ್ರಾಧ್ಯಾಪಕರು
ಮಾಣಿಕ್ಯ, ಗಾಂಧಿನಗರ, ಕಾವೂರು ಅಂಚೆ,
ಮಂಗಳೂರು-575015

## ಸದಸ್ಯರು

**ಬಿ.ಕೆ. ಧನಲಕ್ಷ್ಮಿ,** ನಿವೃತ್ತ ಶಿಕ್ಷಕಿ.
ಮಾತೃಶ್ರೀ. ಸಲ್ಪ ಹೆಬಿಟೇಟ್ಸ್
3ನೇ ಅಡ್ಡ ರಸ್ತೆ, ಅಚ್ಚಡ,
ಕಟಪಾಡಿ, ಉಡುಪಿ.

ಕೆ. ವಿಜಯ ಲಕ್ಷ್ಮಿದೇವಿ,ನಿವೃತ್ತ ಶಿಕ್ಷಕಿ,
ನಂ.359, ಮೊದಲನೇ ಮಹಡಿ,
19ನೇ ಎಫ್ ಮೈನ್, 1ನೇ ಎನ್ ಬ್ಲಾಕ್,
ರಾಜಾಜಿನಗರ, ಬೆಂಗಳೂರು.-10,

**ಲಲಿತ ವೆಂಕಟೇಶ, ಸಶಿ,**
ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ,
ಶೆಟ್ಟಿಹಳ್ಳಿ ಪೋಸ್ಟ್, ಶಿವಮೊಗ್ಗ ತಾ-577277,

**ವಿನಯ್ ಕುಮಾರ್. ಕೆ.ಪಿ, ಸ.ಶಿ,**
ಸ.ಹಿ.ಪ್ರಾ.ಶಾ, ಯಡದಾಲು,
ಶೃಂಗೇರಿ ತಾ, ಚಿಕ್ಕಮಗಳೂರು ಜಿ,

**ತಾರಕೇಶ್,** ಚಿತ್ರಕಲಾ ಶಿಕ್ಷಕರು,
ಸರ್ಕಾರಿ ಪ್ರೌಢಶಾಲೆ, ಬನ್ನಿತಾಳಪುರ,
ಗುಂಡ್ಲುಪೇಟೆ ತಾ, ಚಾಮರಾಜನಗರ ಜಿ

**ಜಂಗಿ,** ಕಲಾವಿದರು
ಡಿ.ಎಸ್.ಇ.ಆರ್.ಟಿ.
(ಮುಖಪುಟ ವಿನ್ಯಾಸ)

## ಕಾರ್ಯಕ್ರಮ ನಿರ್ವಹಣೆ

**ಎ. ಶ್ರೀಧರ್,** ಹಿರಿಯ ಸಹಾಯಕ ನಿರ್ದೇಶಕರು, ಡಿಎಸ್ಇಆರ್‌ಟಿ.

**ಎನ್. ಪಾರ್ವತಿ,** ತಾಂತ್ರಿಕ ಸಹಾಯಕರು, ಡಿಎಸ್ಇಆರ್‌ಟಿ.

# ಆಶಯ ನುಡಿ

ಶಿಕ್ಷಣದ ಧ್ಯೇಯೋದ್ದೇಶಗಳಲ್ಲಿ ಆಗುತ್ತಿರುವ ಬದಲಾವಣೆಗಳು ಹಾಗು ಕಲಿಕೆಯ ವಿಧಾನವು ಪರೀಕ್ಷೆ/ ಪಠ್ಯಪುಸ್ತಕಗಳನ್ನು ಆಧರಿಸದೇ ಸ್ವಕಲಿಕೆ ಮತ್ತು ಸಹಕಲಿಕೆಯನ್ನು ಆಧರಿಸುವತ್ತ ಸಾಗುತ್ತಿರುವ ಹಿನ್ನೆಲೆಯಲ್ಲಿ ತರಗತಿಯಲ್ಲಿ ಮಕ್ಕಳಿಗೆ ಕಲಿಕೆಗೆ ಅನುಕೂಲಿಸುವ ಸನ್ನಿವೇಶಗಳನ್ನು ನೀಡುವುದರೊಂದಿಗೆ ಉತ್ತಮವಾದ ಕಲಿಕಾ ಸಾಮಗ್ರಿಗಳನ್ನು ಒದಗಿಸುವುದು ಅತ್ಯಾವಶ್ಯಕವಾಗಿದೆ.

ಆದ್ದರಿಂದ 4,5,6,7,8 ಮತ್ತು 9 ನೇ ತರಗತಿಗಳಿಗೆ ಕನ್ನಡ ಮತ್ತು ಗಣಿತ ವಿಷಯಗಳಲ್ಲಿ ಹಾಗೂ 5,6,7,8 ಮತ್ತು 9 ನೇ ತರಗತಿಗಳಿಗೆ ಇಂಗ್ಲಿಷ್ ವಿಷಯದಲ್ಲಿ ಅಭ್ಯಾಸ ಪುಸ್ತಕಗಳನ್ನು ರಚಿಸಲಾಗಿದೆ. ಪ್ರತಿ ಅಭ್ಯಾಸ ಪುಸ್ತಕವನ್ನು ಎರಡು ಭಾಗಗಳಲ್ಲಿ ರಚಿಸಲಾಗಿದ್ದು ಮೊದಲ ಅರ್ಧವಾರ್ಷಿಕ ಅವಧಿಯಲ್ಲಿ ಭಾಗ 1 ಅಭ್ಯಾಸ ಪುಸ್ತಕವನ್ನು ಹಾಗೂ ಎರಡನೇ ಅರ್ಧವಾರ್ಷಿಕ ಅವಧಿಯಲ್ಲಿ ಭಾಗ 2 ಅಭ್ಯಾಸ ಪುಸ್ತಕವನ್ನು ನೀಡಲಾಗುವುದು. ಪ್ರತಿ ಘಟಕದ ಅಂತ್ಯದಲ್ಲಿ ಕಿರು ಪರೀಕ್ಷೆಯನ್ನು (Micro test) ನೀಡಿದ್ದು ಸ್ವ ಮೌಲ್ಯಮಾಪನ ಮಾಡಲು ವಿದ್ಯಾರ್ಥಿಗಳಿಗೆ ಸ್ವ ಮೌಲ್ಯಮಾಪನ ಸಾಧನವನ್ನು ಘಟಕವಾರು ನೀಡಿದೆ. ಈ ಅಭ್ಯಾಸ ಪುಸ್ತಕಗಳಲ್ಲಿ ಹೆಚ್ಚು ಮೌಲ್ಯಮಾಪನ ಅಂಶಗಳನ್ನು ಅಳವಡಿಸುವುದರಿಂದ ಕಲಿಕೆಯನ್ನು ಕಂಠಪಾಠ ವಿಧಾನದಿಂದ ಬೇರ್ಪಡಿಸುವುದು ಸಾಧ್ಯವಾಗುತ್ತದೆ. ವೈವಿಧ್ಯಮಯ ಮೌಲ್ಯಮಾಪನ ಅಂಶಗಳ ಮೂಲಕ ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸಿ ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿ ಪಡಿಸಲು ಸಾಧ್ಯವಾಗುವುದು.

ಶ್ರೇಣೀಕರಿಸಿದ ಅಭ್ಯಾಸಗಳನ್ನು ಅಭ್ಯಾಸ ಪುಸ್ತಕದಲ್ಲಿ ನೀಡಿದ್ದು ವೈವಿಧ್ಯತೆಯಿಂದ ಕೂಡಿವೆ. ಹೆಚ್ಚಿನ ಅಭ್ಯಾಸಗಳು ಗಳಿಸಿದ ಜ್ಞಾನವನ್ನು ಜೀವನದಲ್ಲಿ ಅಳವಡಿಸುವಂತಹುಗಳಾಗಿವೆ. ಈ ಅಭ್ಯಾಸ ಪುಸ್ತಕಗಳಲ್ಲಿ ಶಿಕ್ಷಕರಿಗೆ ಸೂಚನೆಗಳನ್ನು ಚಟುವಟಿಕೆಗಳೊಂದಿಗೆ ನೀಡಿದ್ದು ಶಿಕ್ಷಕರು ಅವುಗಳನ್ನು ಓದಿ ತರಗತಿಯಲ್ಲಿ ಮಕ್ಕಳಿಗೆ ಕಲಿಕೆಗೆ ಅತ್ಯಾವಶ್ಯಕವಾದ ಸನ್ನಿವೇಶಗಳನ್ನು ಒದಗಿಸಿಕೊಡಬೇಕು. ಇದರಿಂದಾಗಿ ಮಕ್ಕಳಲ್ಲಿ ಆತ್ಮಸ್ಥೈರ್ಯ ಉಂಟಾಗಿ ಅವರ ವ್ಯಕ್ತಿತ್ವ ಬೆಳವಣಿಗೆಗೆ ನಿರೀಕ್ಷಿತ ರೀತಿಯಲ್ಲಿ ಅನುವು ಮಾಡಿಕೊಟ್ಟಂತಾಗುತ್ತದೆ.

ಬಹಳಷ್ಟು ಅಭ್ಯಾಸಗಳು ಮಕ್ಕಳು ಗುಂಪಿನಲ್ಲಿ ಕುಳಿತು ಮಾಡುವಂತಹುಗಳಿವೆ. ಅವುಗಳ ಗುರಿ ಮಕ್ಕಳು ಅತ್ಯಾವಶ್ಯಕವಾದ ಸಾಮರ್ಥ್ಯಗಳನ್ನು ಕರಗತ ಮಾಡಿಕೊಳ್ಳಲು ಸಹಾಯಕವಾಗುತ್ತವೆ. ಭಾಷೆಗಳಲ್ಲಿ ಭಾಷಾಕಲಿಕೆಯ ಕೌಶಲಗಳಾದ ಆಲಿಸುವುದು, ಮಾತನಾಡುವುದು, ಓದುವುದು, ಬರೆಯುವುದು ಹಾಗೂ ಆಕರ ಗ್ರಂಥಗಳಿಂದ ಮಾಹಿತಿ ಸಂಗ್ರಹಿಸುವುದು ಇತ್ಯಾದಿ ಕೌಶಲಗಳಿಗೆ ಪ್ರಾಮುಖ್ಯತೆಯನ್ನು ಕೊಡಲಾಗಿದೆ.

ಅಭ್ಯಾಸ ಪುಸ್ತಕಗಳ ರಚನೆಯಲ್ಲಿ ಸಹಕರಿಸಿದ ಅಕ್ಷರ ಫೌಂಡೇಶನ್, ಪ್ರಥಮ್ ಮೈಸೂರು, ಶಿಕ್ಷಣ ಫೌಂಡೇಶನ್ ಸಂಸ್ಥೆಯವರು ಸೇರಿದಂತೆ ಪ್ರಾಥಮಿಕ ಶಿಕ್ಷಣ, ಸರ್ವಶಿಕ್ಷಣ ಅಭಿಯಾನ, ಕರ್ನಾಟಕ ಪಠ್ಯಪುಸ್ತಕ ಸಂಘ ಹಾಗೂ ರಚನಾ ಸಮಿತಿಯವರಿಗೆ ಡಿ.ಎಸ್.ಇ.ಆರ್.ಟಿ ಯು ಆಭಾರಿಯಾಗಿದೆ.

ಈ ಅಭ್ಯಾಸ ಪುಸ್ತಕಗಳನ್ನು ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ನಿರೀಕ್ಷಿತ ಉದ್ದೇಶಕ್ಕೆ ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡರೆ ನಮ್ಮೆಲ್ಲರ ಶ್ರಮ ಸಾರ್ಥಕವಾಗುತ್ತದೆ.

**ಬೆಳ್ಳ ಶೆಟ್ಟಿ**
ನಿರ್ದೇಶಕರು
ಡಿ.ಎಸ್.ಇ.ಆರ್.ಟಿ
ಬೆಂಗಳೂರು

# ಮುನ್ನುಡಿ

ಕನ್ನಡ ಪ್ರಥಮ ಭಾಷಾ ವಿದ್ಯಾರ್ಥಿಗಳಿಗಾಗಿ ಪಠ್ಯ ಪುಸ್ತಕಕ್ಕೆ ಪೂರಕವಾಗಿ ಈ ಪುಸ್ತಕವನ್ನು ರೂಪಿಸಲಾಗಿದೆ. ವಿದ್ಯಾರ್ಥಿಗಳಲ್ಲಿ ಕೆಲವರಾದರೂ ಪಠ್ಯದ ಒಂದಲ್ಲ ಒಂದು ಭಾಗದಲ್ಲಿ ಕಲಿಕೆಯಲ್ಲಿ ಹಿಂದಿರುವುದರಿಂದ ಪಠ್ಯದ ಯಾವುದೇ ಭಾಗವನ್ನು ಸಂಪೂರ್ಣವಾಗಿ ಬಿಟ್ಟಿರುವುದಿಲ್ಲ. ಬದಲಾಗಿ ಕ್ಲಿಷ್ಟಕರ ಭಾಗಕ್ಕೆ ಹೆಚ್ಚಿನ ಚಟುವಟಿಕೆ ಹಾಗೂ ಕಡಿಮೆ ಕ್ಲಿಷ್ಟಕರ ಭಾಗಕ್ಕೆ ಕಡಿಮೆ ಚಟುವಟಿಕೆಗಳನ್ನು ನೀಡಲಾಗಿದೆ. ವಿದ್ಯಾರ್ಥಿ ಸ್ವತಂತ್ರವಾಗಿ ಹಾಗೂ ಕೆಲವು ಕಡೆ ಅಧ್ಯಾಪಕರ ಅಥವಾ ಸಹಪಾಠಿಗಳ ನೆರವಿನಿಂದ ಈ ಚಟುವಟಿಕೆಗಳನ್ನು ಮಾಡಬಹುದಾಗಿದೆ. ಈ ಚಟುವಟಿಕೆಗಳನ್ನು ತರಗತಿಗಳಲ್ಲಿ, ತರಗತಿಯ ನಂತರ ಅಥವಾ ಮನೆಯಲ್ಲಿ ಮಾಡಬಹುದಾಗಿದೆ. ಯಾವುದೇ ವಿಷಯಕ್ಕೆ ನೇರ ವ್ಯಾಖ್ಯೆಯನ್ನು ನೀಡದೆ ಆಕರ್ಷಕ ಚಿತ್ರ, ಓದು, ಬರಹದ ಮೂಲಕ ವಿದ್ಯಾರ್ಥಿಗಳು ಅದನ್ನು ಅರ್ಥೈಸಿಕೊಳ್ಳುವಂತೆ ಸರಳವಾಗಿ ರೂಪಿಸಲಾಗಿದೆ.

ಪ್ರತಿ ಅಧ್ಯಾಯದಲ್ಲೂ ವಿದ್ಯಾರ್ಥಿ ಸ್ವಯಂ ಮೌಲ್ಯಮಾಪನ ಸೇರಿಸಿದೆ. ಇದು ದರ್ಜಾಮಾಪನದಲ್ಲಿದೆ. ಇಲ್ಲಿ A ಅಂದರೆ ಅತ್ಯುತ್ತಮ, B ಅಂದರೆ ಉತ್ತಮ ಹಾಗೂ C ಅಂದರೆ ಸಾಧಾರಣ ಎಂದು ಸೂಚಿಸುತ್ತದೆ. ಈ ದರ್ಜಾಮಾಪನವನ್ನು ವಿದ್ಯಾರ್ಥಿಗಳಿಗೆ ಪರಿಚಯ ಮಾಡಿಕೊಡುವುದು. ಪ್ರತಿ ಅಧ್ಯಾಯದ ಬಗ್ಗೆ ವಿದ್ಯಾರ್ಥಿಯು ತನ್ನನ್ನು ಮೌಲ್ಯಮಾಪನ ಮಾಡಿಕೊಂಡಿರುವುದು ಎಷ್ಟರಮಟ್ಟಿಗೆ ಅರ್ಥಪೂರ್ಣವಾಗಿದೆ ಎಂದು ಪರಿಶೀಲಿಸಲು ಒಂದು ಚಿಕ್ಕದಾದ ಪರೀಕ್ಷೆ ನೀಡಿದೆ. ಶಿಕ್ಷಕರು ಕಿರುಪರೀಕ್ಷೆಯನ್ನು ಮೌಲ್ಯಮಾಪನ ಮಾಡುವುದು. ವಿದ್ಯಾರ್ಥಿಗಳ ಆತ್ಮವಿಶ್ವಾಸಕ್ಕೆ ಧಕ್ಕೆ ಬಾರದಂತೆ ಈ ಕಿರುಪರೀಕ್ಷೆಯಲ್ಲಿನ ಫಲಿತವನ್ನು ಗಮನಿಸಿ ಶಿಕ್ಷಕರು ಮಕ್ಕಳಿಗೆ ಪ್ರೋತ್ಸಾಹಿಸಬೇಕು.

ಇಲ್ಲಿ ನೀಡಿರುವ ಚಟುವಟಿಕೆಗಳೇ ಅಂತಿಮವಲ್ಲ, ಕಲಿಕೆಗೆ ಸಂಬಂಧಿಸಿದಂತೆ ಪರಿಸರದಲ್ಲಿನ ಅಂಶಗಳನ್ನು ಆಧರಿಸಿ ಕಲಿಯಲು ಮುಕ್ತ ಅವಕಾಶ ನೀಡಬೇಕು. ಮಗು ಮಾಡಿದ ಚಟುವಟಿಕೆಗಳನ್ನು ಗಮನಿಸಿ ಶಿಕ್ಷಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ಕಲ್ಪಿಸಲಾಗಿದೆ.

ಅಭ್ಯಾಸ ಪುಸ್ತಕ ರಚನಾ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ಅವಕಾಶ ನೀಡಿದ ಇಲಾಖಾ ಅಧಿಕಾರಿಗಳಿಗೂ, ಆಸಕ್ತಿಯಿಂದ ತೊಡಗಿಸಿಕೊಂಡು ರಚಿಸಲು ಸಹಕರಿಸಿದ ಸಮಿತಿಯ ಸದಸ್ಯರೆಲ್ಲರಿಗೂ ಕೃತಜ್ಞತೆಗಳು.

**ಡಾ. ನರಸಿಂಹ ಮೂರ್ತಿ. ಆರ್**

ರಚನಾ ಸಮಿತಿ–ಅಧ್ಯಕ್ಷರು

# ಪುನರಾವರ್ತನೆ



ಅ ಅಕ್ಷರಗಳನ್ನು ಹೇಳುತ್ತಾ ಬರೆಯುವಿರಾ ?

ಅ ಆ ಇ ಈ ಉ ಊ ಋ ಎ

ಏ ಐ ಒ ಓ ಔ ಅಂ ಅಃ

ಕ ಖ ಗ ಘ ಙ

ಚ ಛ ಜ ಝ ಞ

ಟ ಠ ಡ ಢ ಣ

ತ ಥ ದ ಧ ನ

ಪ ಫ ಬ ಭ ಮ

ಯ ರ ಲ ವ ಶ

ಷ ಸ ಹ ಳ

## ಆ. ಯೋಚಿಸಿ ಬರೆಯುವೆಯಾ ?

1. ನನ್ನ ಬಡಿತದ ಶಬ್ದ ಈ ಕೆಳಗಿನ ಪದವಾಗಿದೆ



ಅ. ಢಣ ಢಣ

ಆ. ಡಬ ಡಬ

ಇ. ಢವ ಢವ

ಈ. ಪಟ ಪಟ

2. ಹರಿಯುವ ನೀರಿನ ಸಪ್ಪಳ



ಅ. ಟಪ ಟಪ

ಆ. ಥಳ ಥಳ

ಇ. ಝುಳು ಝುಳು

ಈ. ಝಣ ಝಣ

3. ಈ ಪದಗಳಲ್ಲಿ ಹೆಸರುಗಳನ್ನು ಹೆಕ್ಕಲು ಹಕ್ಕಿಗೆ ಸಹಾಯ ಮಾಡಿ.






______ ______ ______ ______

ಇವುಗಳನ್ನು ಪುನಃ ಹೇಳುತ್ತಾ ಬರೆಯಿರಿ.

______ ______ ______ ______

ಇ. (ಶಿಕ್ಷಕರೇ ಕೆಳಗೆ ಕೊಟ್ಟಿರುವ ಚಿತ್ರಗಳನ್ನು ಗಮನಿಸಿ. ಅವುಗಳಿಗೆ ಸಂಬಂಧಿಸಿದ ಪದಗಳನ್ನು ಅಕ್ಷರ ಪಟ್ಟಿಯಲ್ಲಿ ಗಮನಿಸಿ; ಪದ ರಚಿಸಲು ಸೂಚಿಸಿ.)

ಮಕ್ಕಳೇ ಪದಗಳನ್ನು ಹುಡುಕುವಿರಾ?

| | | | | |
|---|---|---|---|---|
| ಕ | ಳ | ಲ | ಹ | ತ |
| ವ | ಸ | ಗ | ಪ | ಬ |
| ಉ | ಮ | ಟ | ನ | ಔ |
| ಣ | ರ | ಓ | ಯ | ಈ |
| ಶ | ದ | ಅ | ಊ | ಷ |

1)  ________________

2)  ________________

3)  ________________

4)  ________________

5)  ________________

ಈ. ವಾಕ್ಯಗಳನ್ನು ಓದಿ ಇಲ್ಲಿ ಬರುವ ಗುಣಿತಾಕ್ಷರಗಳನ್ನು ಗುರುತಿಸಿ ಬರೆಯ ಬಲ್ಲಿರಾ?

ಕರ್ನಾಟಕವು ಉದ್ದವಾದ ಸಮುದ್ರತೀರ, ವಿಶಾಲವಾದ ಬಯಲುಸೀಮೆ, ಎತ್ತರವಾದ ಘಟ್ಟಗಳಿಂದ ಕೂಡಿದ ಸುಂದರ ನಾಡು. ಇಲ್ಲಿಯ ಕಾಡುಗಳು ಹಚ್ಚ ಹಸುರಾಗಿದ್ದು ನೋಡಲು ಸುಂದರವಾಗಿವೆ.

ಇಲ್ಲಿ ಗುಣಿತಾಕ್ಷರಗಳನ್ನು ಬರೆಯಿರಿ



ಉ. ಮಾದರಿಯಂತೆ ಯಾವುದಾದರೂ 8 ಅಕ್ಷರಗಳಿಗೆ ಗುಣಿತಾಕ್ಷರಗಳನ್ನು ಬರೆಯಿರಿ.

| | | | | | | | | | | | | | | |
|---|---|---|---|---|---|---|---|---|---|---|---|---|---|---|
| ಕ | ಕಾ | ಕಿ | ಕೀ | ಕು | ಕೂ | ಕೃ | ಕೆ | ಕೇ | ಕೈ | ಕೊ | ಕೋ | ಕೌ | ಕಂ | ಕಃ |
| | | | | | | | | | | | | | | |
| | | | | | | | | | | | | | | |
| | | | | | | | | | | | | | | |
| | | | | | | | | | | | | | | |
| | | | | | | | | | | | | | | |
| | | | | | | | | | | | | | | |
| | | | | | | | | | | | | | | |
| | | | | | | | | | | | | | | |

ಗುಣಿತಾಕ್ಷರಗಳನ್ನು ಬಳಸಿಕೊಂಡು 6 ಪದಗಳನ್ನು ರಚಿಸಿ.

ಊ. ಈ ಕಥೆಯನ್ನು ಓದುವಿರಾ ?

ಒಂದು ಸಂಜೆ ಗಂಗಾನದಿಯ ದಂಡೆಯ ಮೇಲೆ ನಾಲ್ಕಾರು ಮಕ್ಕಳು ನಿಂತಿದ್ದರು. ಅವರು ನದಿಯನ್ನು ದಾಟಿ ಊರು ಸೇರಬೇಕಿತ್ತು. ಅಷ್ಟರಲ್ಲಿ ದೋಣಿಯೊಂದು ಅಲ್ಲಿಗೆ ಬಂದಿತು. ಮಕ್ಕಳು ದೋಣಿ ಏರಿದರು. ಅದು ಹೊರಟಿತು. ಬಾಲಕನೊಬ್ಬನು ಮಾತ್ರ ದೋಣಿ ಏರಲಿಲ್ಲ. ದೋಣಿಯವನಿಗೆ ಕೊಡುವಷ್ಟು ಹಣ ಅವನಲ್ಲಿ ಇರಲಿಲ್ಲ. ಮತ್ತೊಬ್ಬರನ್ನು ಕೇಳಿ ಹಣ ಪಡೆಯುವುದು ಅವನಿಗೆ ಹಿಡಿಸಲಿಲ್ಲ. ನದಿ ತುಂಬಿ ಹರಿಯುತ್ತಿತ್ತು. ಕತ್ತಲಾಗುತ್ತ ಬಂದಿತು. ಆದರೆ ಬಾಲಕ ಸ್ವಲ್ಪವೂ ಅಂಜಲಿಲ್ಲ. ಧೈರ್ಯವಾಗಿ ನೀರಿನಲ್ಲಿ ಧುಮುಕಿದನು. ಈಜಿ ದಡ ಸೇರಿದನು. ಆ ಧೀರ ಬಾಲಕನೇ ಲಾಲ್ ಬಹದ್ದೂರ್. ಲಾಲ್ ಬಹದ್ದೂರ್ ಮುಂದೆ ದೇಶದ ಪ್ರಧಾನ ಮಂತ್ರಿಯಾದರು.



೩. ನಾವು ಒತ್ತಕ್ಷರದ ಪದಗಳು, ನಮ್ಮನ್ನು ಹೇಳುತ್ತಾ ಬರೆಯುವಿರಾ ?

| | | | | |
|---|---|---|---|---|
| ತಕ್ಕಡಿ | ನಾಲ್ಕು | ಸುಗ್ಗಾಟ | ಉದ್ಗಾರ | ಉದ್ಘಾಟನೆ |
| ಮೆಚ್ಚುಗೆ | ಪಶ್ಚಿಮ | ಕಜ್ಜಾಯ | ಕಬ್ಬು | ಯಜ್ಞ |
| ಕೃತಜ್ಞತೆ | ಕಟ್ಟಡ | ಕಷ್ಟ | ಕನಿಷ್ಠ | ದೊಡ್ಡ |
| ಹೆಣ್ಣಾನೆ | ಉಷ್ಣ | ಅತ್ತೆ | ರಕ್ತ | ತಟಸ್ಥ |
| ಸಂಸ್ಥೆ | ಹದ್ದು | ಶುದ್ಧ | ಕನ್ನಡ | ಸ್ನಾನ |
| ಮುಪ್ಪು | ಅಲ್ಪಸ್ವಲ್ಪ | ಹೆಬ್ಬಾವು | ಉದ್ಭವ | ತಮ್ಮ |
| ಸನ್ಮಾನ | ಅಯ್ಯ | ಉಯ್ಯಾಲೆ | ಕರ್ತನೆ | ಇಂದ್ರ |
| ನಕ್ಷತ್ರ | ಚಿತ್ರಾನ್ನ | ಜಿಲ್ಲೆ | ಬಹದ್ದೂರ್ | |
| ಕತ್ತಲು | ಉತ್ತರ | ವಿಶ್ವಾಸ | ಪಶ್ಚಿಮಘಟ್ಟ | |

ಎ. ಮರದ ಹಣ್ಣುಗಳಲ್ಲಿರುವ ಒತ್ತಕ್ಷರಗಳನ್ನು ನೋಡಿ ಪಕ್ಕದಲ್ಲಿ ನೀಡಿರುವ ಸೂಕ್ತ ಸಾಲಿನಲ್ಲಿ ಬರೆಯಿರಿ





# ಸೇತುಬಂಧ

**1. ಪದ ರಚಿಸ ಬಲ್ಲಿರಾ :-**




1) ______________________

2) ______________________

3) ______________________

4) ______________________

5) ______________________

**2. ಕೂಡಿಸಿ ಬರೆಯಬಲ್ಲಿರಾ ?**

1. ರೈಲು + ಅನ್ನು = ______________________
2. ಕಾಣಲು + ಇಲ್ಲ = ______________________
3. ಆಡಲು + ಇಲ್ಲ = ______________________
4. ನೀವು + ಏಕೆ = ______________________
5. ಅದು + ಏಕೆ = ______________________
6. ಮಾಡು + ಇಸು = ______________________

**3. ಕೊಟ್ಟಿರುವ ಪದಗಳನ್ನು ಸರಿಯಾಗಿ ಜೋಡಿಸಿ ವಾಕ್ಯ ರಚಿಸಿರಿ :**

| | | |
|---|---|---|
| ಸೈನಿಕರು | ರಾಜ್ಯವನ್ನು | ಕಾಯುತ್ತಾರೆ |
| ಮಕ್ಕಳು | ಪಂದ್ಯವನ್ನು | ಆಳಿದರು |
| ರಾಜರು | ಹಾಡನ್ನು | ಮಾಡುವರು |
| ಗುರುಗಳು | ವಿಗ್ರಹಗಳನ್ನು | ಹಾಡುತ್ತಾರೆ |
| ಶಿಲ್ಪಿಗಳು | ದೇಶವನ್ನು | ಕೆತ್ತಿದರು |

ಮಾದರಿ : ಸೈನಿಕರು ದೇಶವನ್ನು ಕಾಯುತ್ತಾರೆ.

1) ______________________________

2) ______________________________

3) ______________________________

4) ______________________________

**4. ನಮ್ಮಗಳ ಸಂಖ್ಯೆ ಹೆಚ್ಚಿದಾಗ ನೀವು ಏನೆನ್ನುವಿರಿ ?**

ಪ್ರಜೆ
ಅಂಗಡಿ
ಆಯತ
ಚಿತ್ರ
ಮರ
ಶಾಲೆ



ಮಾದರಿ : ಪ್ರಜೆ - ಪ್ರಜೆಗಳು

1) ______________________________

2) ______________________________

3) ______________________________

4) ______________________________

5) ______________________________



5. ನಮ್ಮ ಬಹುವಚನ ರೂಪವನ್ನು ಚಿತ್ರದಲ್ಲಿ ಬರೆದು ತೋರಿಸುವೆಯಾ ?

1.  -

2.  -

3.  -

4.  -

6. **ಹಣ್ಣಿನೊಳಗಿರುವ ಅಕ್ಷರಗಳನ್ನು ಬಳಸಿ 15 ಪದಗಳನ್ನು ರಚಿಸುವೆಯಾ ?**






1)..........................................

2)..........................................

3)..........................................

4)..........................................

5)..........................................

6)..........................................

7)..........................................

8)..........................................

9)..........................................

10)........................................

11)..........................................

12)..........................................

13)..........................................

14)..........................................

15)........................................

7. ಕೆಳಗಿನ ಚಿತ್ರವನ್ನು ಗಮನಿಸಿ, ಮೊದಲನೇ ಗೂಳಿಯ ಮೇಲಿನ ಪದಗಳಿಗೆ ವಿರುದ್ಧಾರ್ಥಕ ಪದಗಳು ಎರಡನೇ ಗೂಳಿಯ ಮೇಲಿವೆ. ಅವುಗಳನ್ನು ಮಾದರಿಯಂತೆ ಆರಿಸಿ ಬರೆಯುವಿರಾ ?




ಮಾದರಿ : ಶಿಸ್ತು X ಅಶಿಸ್ತು

1. ________________ X ________________

2. ________________ X ________________

3. ________________ X ________________

4. ________________ X ________________

5. ________________ X ________________

8. ಶಿಕ್ಷಕರೇ ಮಕ್ಕಳಿಗೆ ಕೆಳಗಿನ ಚಿತ್ರದ ಸನ್ನಿವೇಶವನ್ನು ಗಮನಿಸಿ. ನಂತರ ಕೊಟ್ಟಿರುವ ಪದಗಳನ್ನು ಬಳಸಿ ವಾಕ್ಯ ರಚಿಸುವಂತೆ ಸೂಚಿಸಿ



ಮಕ್ಕಳೇ, ಸ್ವಂತ ವಾಕ್ಯ ರಚಿಸುವಿರಾ ?

1. ಉದ್ಯಾನವನ : ______________________________

2. ಜೋಕಾಲಿ : ______________________________

3. ಸುಂದರ : ______________________________

4. ಆಟವಾಡು : ______________________________

**9. ಮಾದರಿಯಂತೆ ಚಿತ್ರರಚಿಸಿ ಬಹುವಚನ ರೂಪ ಗುರುತಿಸುವಿರಾ ?**

ಮಾದರಿ



ಮಗು

—



ಮಕ್ಕಳು

---

1.



ಕೊಡಲಿ

—

---

2.



ಕಿಟಕಿ

—

---

3.



ಬೀಗ

—

---

4.



ಜೀಪು

—

**10. ಇಲ್ಲಿ ಗಾದೆ ಮಾತುಗಳನ್ನು ಚಿತ್ರ ಸಹಿತ ವಾಕ್ಯಗಳಲ್ಲಿ ನೀಡಿದೆ. ಅವುಗಳನ್ನು ಸರಿಯಾಗಿ ಜೋಡಿಸಿ ಬರೆಯಿರಿ.**

**ಗಮನಿಸಿ : ನೀವು ವಾಕ್ಯ ಸರಿಪಡಿಸಿ ಬರೆಯುವಾಗ ಚಿತ್ರದ ಪದವನ್ನು ಬರೆಯಿರಿ.**

1. ಕೆಸರಾದರೆ ಬಾಯಿ  ಮೊಸರು

______________________________

2. ಕೂತು  ತಿನ್ನುವವನಿಗೆ ಸಾಲದು ಹೊನ್ನು

______________________________

3. ಬೆಟ್ಟ ದೂರದ  ನುಣ್ಣಗೆ

______________________________

4. ಒಳ್ಳೆಯದಾದರೆ  ನಾಡೆಲ್ಲಾ ಒಳ್ಳೆಯದು

______________________________

5. ಹಾಲು ಕಪ್ಪೇ ಕಪ್ಪಾದರೆ 

______________________________

**11. ಕೆಳಗಿನ ವಾಕ್ಯಗಳನ್ನು ಸರಿಪಡಿಸಿ ಬರೆಯಬಲ್ಲಿರಾ ?**

ಮಾದರಿ : ನಾವು ಶಾಲೆಗೆ ಹೋಗುತ್ತೇನೆ.

ನಾವು ಶಾಲೆಗೆ ಹೋಗುತ್ತೇವೆ.

1. ಶೀಲಾ ಕಥೆ ಬರೆಯುತ್ತಾನೆ.

______________________________

2. ಇಂದು ಮಳೆ ಬರುವ ಸಾಧ್ಯತೆ ಇವೆ.

______________________________

3. ನಮ್ಮ ತರಗತಿಯಲ್ಲಿ ಹುಡುಗ ಇದ್ದಾರೆ.

______________________________

4. ಕಾಡಿನಲ್ಲಿ ಮರಗಳು ಇದೆ.

______________________________

5. ಜಿಂಕೆ ಹಸಿರು ಹುಲ್ಲು ತಿನ್ನುತ್ತಿವೆ.

______________________________

6. ಆಕಾಶದಲ್ಲಿ ನಕ್ಷತ್ರಗಳ ರಾಶಿ ಇರುವರು.

______________________________

**12. ಮಾದರಿಯಂತೆ ಪದ ರಚಿಸಿ ಬರೆಯುವಿರಾ ?**

ಮಾದರಿ : ಎಮ್ಮೆ + ಗಳು = ಎಮ್ಮೆಗಳು

1. ಮುಖ + ಗಳು = ______________________

2. ಕಟ್ಟೆಗೆ + ಗಳು = ______________________

3. ಹಕ್ಕಿ + ಗಳು = ______________________

4. ಹಾಳೆ + ಗಳು = ______________________

5. ವಾಹನ + ಗಳು = ______________________

13. ಕೆಳಗೆ ಕೊಟ್ಟಿರುವ ಪದಗಳ ಸರಿಯಾದ ರೂಪ ಗುರುತಿಸಿ ವೃತ್ತದಲ್ಲಿ ಹೊಂದಿಸಿ ಬರೆಯುವಿರಾ ?.

(ವರ, ಮೋಡ, ತಾಯಿ, ಬೆಟ್ಟ, ಹೆಣ್ಣು , ಸೂರ್ಯ)





**14. ಮಾದರಿಯಂತೆ ಅಕ್ಷರದಲ್ಲಿ ಪದ ರಚಿಸುತ್ತಾ ಸಂಚರಿಸಿ ನೋಡೋಣ ಬನ್ನಿ.**


















## 15. ಮಕ್ಕಳೇ, ಪದ ಹುಡುಕಿ ಚಿತ್ರ ಹೊಂದಿಸ್ತಿರಾ ?

**ಶಿಕ್ಷಕರಿಗೆ ಸೂಚನೆ :** ''ಅ'' ಪಟ್ಟಿಯಲ್ಲಿರುವ ಚಿತ್ರಗಳ ಸಹಾಯದಿಂದ ಅಕ್ಷರ ಬಂಧ ಬಳಸಿ ಪದ ರಚಿಸಿ. ರಚಿಸಿದ ಪದಕ್ಕೆ ಸಂಬಂಧಿಸಿದ ''ಆ'' ಪಟ್ಟಿಯಲ್ಲಿನ ಚಿತ್ರಕ್ಕೆ ಹೊಂದಿಸಿ ಗೆರೆ ಎಳೆದು ಕಾರಣ ಹೇಳಿಸಿರಿ.



| | | | | | | | | | |
|---|---|---|---|---|---|---|---|---|---|
| ಮೊ | ರ | ತ | ಜ | ಚ | ಲ | ಗ್ಗ | ಲು | ಹೆ | ಮ |
| ಗ್ಗ | ಬ | ಅ | ಕ್ಕ | ಟ್ಟೆ | ಡಿ | ಕೆ | ಚ್ಚ | ಳು | ಣ |

ಅ

1.  ____________

2.  ____________

3.  ____________

4.  ____________

5.  ____________

ಆ

i. 

ii. 

iii. 

iv. 

v. 



## ಅಭ್ಯಾಸ - 1

1. ಚಿತ್ರಕ್ಕೆ ಹೊಂದುವ ಪದವನ್ನು ಹುಡುಕಿ ಬರೆಯುವಿರಾ ?





















20



(ಹಲ್ಲಿ, ಇಪ್ಪತ್ತು, ಚಂದ್ರ, ವಜ್ರ, ಗೃಹ, ಆಟೋರಿಕ್ಷಾ, ಕಬ್ಬು ಅಜ್ಜ ಪೆಟ್ಟಿಗೆ, ಪುಸ್ತಕ, ಸೂರ್ಯ, ನಮಸ್ಕಾರ)

## 1.ಅ. ಪುಟ್ಟಿಗೆ ಸಹಾಯ ಮಾಡಿ.



| | | | | |
|---|---|---|---|---|
| ಕ್ಕ | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |

ಬಲೂನಲ್ಲಿರುವ ಒತ್ತಕ್ಷರಗಳನ್ನು ಕ್ರಮವಾಗಿ ಬರೆಯುವೆಯಾ ಪುಟ್ಟಿ ?

1..ಆ. ಕೆಳಗಿನ ಅಕ್ಷರ ಮಣಿಗಳಿಗೆ ಒತ್ತಕ್ಷರ ಮಣಿಗಳನ್ನು ಬರೆಯಬಲ್ಲಿರಾ ?



ಕ ಖ ಗ ಘ ಙ

ಚ ಛ ಜ ಝ ಞ

ಟ ಠ ಡ ಢ ಣ

ತ ಥ ದ ಧ ನ

ಪ ಫ ಬ ಭ ಮ

ಯ ರ ಲ ವ ಶ ಷ ಸ ಹ ಳ

1.ಇ. 1ನೇ ಸಾಲಿನ ಅಕ್ಷರಕ್ಕೆ 2ನೇ ಸಾಲಿನ ಒತ್ತಕ್ಷರ ಸೇರಿಸಿ 3ನೇ ಸಾಲಿನಲ್ಲಿ ಬರೆಯಿರಿ

| | | | | | |
|---|---|---|---|---|---|
| 1. | ಕ | ಖ | ಗ | ಘ | ಙ |
| 2. | ್ಕ | ್ಖ | ್ಗ | ್ಘ | ್ಙ |
| 3. | | | | | |

| | | | | | |
|---|---|---|---|---|---|
| 1. | ಚ | ಛ | ಜ | ಝ | ಞ |
| 2. | ್ಚ | ್ಛ | ್ಜ | ್ಝ | ್ಞ |
| | | | | | |

| | | | | | |
|---|---|---|---|---|---|
| 1. | ಟ | ಠ | ಡ | ಢ | ಣ |
| 2. | ್ಟ | ್ಠ | ್ಡ | ್ಢ | ್ಣ |
| 3. | | | | | |

| | | | | | |
|---|---|---|---|---|---|
| 1. | ತ | ಥ | ದ | ಧ | ನ |
| 2. | ್ತ | ್ಥ | ್ದ | ್ಧ | ್ನ |
| | | | | | |

| | | | | | |
|---|---|---|---|---|---|
| 1. | ಪ | ಫ | ಬ | ಭ | ಮ |
| 2. | ್ಪ | ್ಫ | ್ಬ | ್ಭ | ್ಮ |
| 3. | | | | | |

**ಹೆಚ್ಚಿನ ಮಾಹಿತಿಗಾಗಿ :**

1. ಒಂದು ವ್ಯಂಜನಕ್ಕೆ ಅದೇ ವ್ಯಂಜನದ ಒತ್ತಕ್ಷರ – ಸಜಾತೀಯ ಒತ್ತಕ್ಷರ ಉದಾ:- ಕ್ಕ ಚ್ಚ
2. ಒಂದು ವ್ಯಂಜನಕ್ಕೆ ಮತ್ತೊಂದು ವ್ಯಂಜನದ ಒತ್ತಕ್ಷರ – ವಿಜಾತೀಯ ಒತ್ತಕ್ಷರ ಉದಾ: ಕ್ತ ಚ್ಟ

| | | | | | | | | | |
|---|---|---|---|---|---|---|---|---|---|
| 1. | ಯ | ರ | ಲ | ವ | ಶ | ಷ | ಸ | ಹ | ಳ |
| 2. | ್ಯ | ್ರ | ್ಲ | ್ವ | ್ಶ | ್ಷ | ್ಸ | ್ಹ | ್ಳ |
| 3 | | | | | | | | | |

**1.ಈ. ಚುಕ್ಕೆಗಳನ್ನು ಸೇರಿಸಿ ನಾನು ಯಾವ ಪ್ರಾಣಿ ಎಂದು ಗುರುತಿಸಿ. ನನ್ನೊಳಗಿರುವ ಒತ್ತಕ್ಷರ ಪದಗಳನ್ನು ವಿಂಗಡಿಸಿ ಬರೆಯುವಿರಾ ?**




| **ಸಜಾತಿ ಒತ್ತಕ್ಷರ ಪದಗಳು** | **ವಿಜಾತಿಯ ಒತ್ತಕ್ಷರ ಪದಗಳು** |
|---|---|
| 1 ____________ | 1 ____________ |
| 2 ____________ | 2 ____________ |
| 3 ____________ | 3 ____________ |
| 4 ____________ | 4 ____________ |
| 5 ____________ | 5 ____________ |
| 6 ____________ | 6 ____________ |
| 7 ____________ | 7 ____________ |
| 8 ____________ | 8 ____________ |

ಗಮನಿಸಿ : ವೃಕ್ಷದಲ್ಲಿರುವ ಒತ್ತಕ್ಷರಗಳನ್ನು ಅಭ್ಯಾಸ ಮಾಡಿ





**1.ಉ. ಪುಟ್ಟನಿಗೆ ಸರಿಯಾದ ಪದ ಹುಡುಕಿ ಕೊಡುವಿರಾ ?**



1.  __________ (ಗುಜ್ಜರಿ, ನುಜ್ಜರಿ, ಗಜ್ಜರಿ)

2.  __________ (ಹೇನು, ಜೇನು, ಬಾನು)

3.  __________ (ಹೆಬ್ಬಾವು, ಹಗ್ಗ )

4.  __________ (ಹೆಬ್ಬೆಟ್ಟು , ತಂಬಿಟ್ಟು )

5.  __________ (ಗುಡ್ಡ , ಗಡ್ಡ )

**1.ಊ. ಚಿತ್ರಕ್ಕೆ ಸಂಬಂಧಿಸಿದ ವಾಕ್ಯಗಳು ಸರಿಯಾಗಿವೆಯೇ ? ತಪ್ಪಿದ್ದಲ್ಲಿ ಸರಿಪಡಿಸಿ ಬರೆಯಿರಿ**

1.  ಅವಳು ಆಟ ಆಡುತ್ತಿದ್ದಾಳೆ.

______________________________

2.  ಯುವತಿಯರು ಸಾಲಾಗಿ ನಿಂತಿದ್ದಾರೆ.

______________________________

3.  ರಾಣಿ ನೀರು ಕುಡಿಯುತ್ತಿದ್ದಾಳೆ.

______________________________

**2. ಬಿಟ್ಟ ಸ್ಥಳದಲ್ಲಿ ಸರಿಯಾದ ಒತ್ತಕ್ಷರ ಬರೆಯುವಿರಾ ?**

( ಜ್ಜ , ಜ್ಜಿ , ಜ್ಜೆ , ಜ್ಜಾ )

| | |
|---|---|
| ಅ | |

| | | |
|---|---|---|
| ಸ | | ಗೆ |

| | |
|---|---|
| ಗೆ | |

| | | |
|---|---|---|
| ಕ | | ಯ |

**2.ಅ. ಬಿಟ್ಟ ಸ್ಥಳ ತುಂಬುವಿರಾ ?**

( ಣ್ಣ , ಣ್ಣಿ , ಣ್ಣು , ಣ್ಣೀ , ಣ್ಣಿ )

| | |
|---|---|
| ಅ | |

| | | |
|---|---|---|
| ಕ | | ನ |

| | |
|---|---|
| ಮ | |

| | | |
|---|---|---|
| ಕ | | ರು |

| | | |
|---|---|---|
| ಹು | | ಮೆ |

**2.ಆ. ಸೋನು ಇವಳ ಪ್ರಶ್ನೆಗೆ ಉತ್ತರ ಬರೆಯುವಿರಾ ?**

‘**ಅಕ್ಕ**’ ಈ ಪದದಲ್ಲಿ ನೀನು ಯಾವ ಅಕ್ಷರವನ್ನು ಒತ್ತಿ ಹೇಳಿದೆ ?





______________________________

ಹಾಗಾದಾರೆ ಇಲ್ಲಿ ಒತ್ತಕ್ಷರ ಯಾವುದು ?





______________________________

ನಾನು ಕೊಟ್ಟಿರುವ ಪದಗಳನ್ನು

ಉಚ್ಚರಿಸುತ್ತಾ ಬರೆಯುವೆಯಾ.. ?

**ಸಜ್ಜಿಗೆ, ಚಿಣ್ಣರು, ಕಜ್ಜಾಯ, ಕೊಬ್ಬರಿ, ಬೊಬ್ಬೆ ,**

**ತೊವ್ವೆ, ನವ್ವಾಲೆ, ಅವ್ವ**





**2.ಇ. ಕೆಳಗಿನ ಪದಗಳು ಸರಿಯಾಗಿವೆಯೇ... ?**

ಕಬು, ಅಮ, ಹಣು, ಮಕಳು, ಅಣ, ತೆಪ,

ಮಗ, ಪೆಟಿಗೆ, ಗುಡ, ಹೆಗಣ,



ಇಲ್ಲಾವಾದಲ್ಲಿ ಒತ್ತಕ್ಷರಗಳನ್ನು ಸೇರಿಸಿ ಕೆಳಗೆ ಬರೆಯಿರಿ.

## 2.ಈ. ನಮ್ಮಲ್ಲಿ ಒತ್ತಕ್ಷರಗಳು ಬಿಟ್ಟುಹೋಗಿವೆ ಹುಡುಕಿ ಬರೆಯುವಿರಾ ?

ಹದು　　ಉಷ　　ಅತೆ　　ಅಯ

ನಾಲು　　ಕಬು　　ಕಟಡ　　ದೊಡ

ಜಿಲೆ　　ಸಂಸೆ



( ದ ' ಣ ' ತ ' ಟ ' ಯ ' ಡ ' ಬ ' ಕ ' ಲ ' ಥ )

________________ ________________ ________________

________________ ________________ ________________

________________ ________________ ________________

________________ ________________ ________________

## 2.ಉ. 'ಣ್ಣು' ಸೇರಿಸಿ ಪದಗಳನ್ನು ಬರೆಯಬಲ್ಲಿರಾ :

ಣ್ಣು

1. ಮ　　1. ________________
2. ಹ　　2. ________________
3. ಹೆ　　3. ________________
4. ಕ　　4. ________________
5. ಗಿ　　5. ________________
6. ಹು　　6. ________________

2.ಊ. ಈ ಒತ್ತಕ್ಷರ ಪದಗಳನ್ನು ಓದುತ್ತಾ ಪಕ್ಕದಲ್ಲಿ ಬರೆಯುವಿರಾ ?

| ಡ್ಡ | | ದ್ದ | | ಪ್ಪ | | ಳ್ಳ | |
|---|---|---|---|---|---|---|---|
| ಗಡ್ಡ | | ಬಿದ್ದ | | ಅಪ್ಪ | | ತಳ್ಳು | |
| ದಡ್ಡ | | ಗದ್ದಲ | | ಹಪ್ಪಳ | | ಹಳ್ಳ | |
| ದೊಡ್ಡ | | ಇದ್ದಿಲು | | ತಪ್ಪಲೆ | | ಕೊಳ್ಳ | |
| ಗುಡ್ಡ | | ಮದ್ದಾನೆ | | ತಪ್ಪು | | ಬಳ್ಳಿ | |
| ಕಡ್ಡಾಯ | | ಒದ್ದಾಟ | | ದಪ್ಪ | | ಕಳ್ಳಿ | |
| ಅಡ್ಡಿ | | ಲದ್ದಿ | | ಚಪ್ಪಾಳೆ | | ಬೆಳ್ಳಿ | |
| ಕಡ್ಡಿ | | ಸುದ್ದಿ | | ಉಪ್ಪಿಟ್ಟು | | ಹಳ್ಳಿ | |
| ದುಡ್ಡು | | ಕದ್ದು | | ಕಪ್ಪು | | ಮುಳ್ಳು | |
| ಲಡ್ಡು | | ಸದ್ದು | | ಉಪ್ಪು | | ಎಳ್ಳು | |
| ಗೆಡ್ಡೆ | | ಹದ್ದು | | ರೆಪ್ಪೆ | | ಕಳ್ಳು | |
| ಅಸಡ್ಡೆ | | ಸಿದ್ದಿ | | ಸಿಪ್ಪೆ | | ಜಳ್ಳು | |
| ಜಿಡ್ಡು | | ಬುದ್ದಿ | | ತಪ್ಪಾಗಿ | | ಹಳ್ಳಿ | |
| ದೊಡ್ಡಪ್ಪ | | ನಿದ್ದೆ | | ಒಪ್ಪಿಕೊ | | ಮಳ್ಳಿ | |

**2.ಖ. ಈ ಚಿತ್ರವನ್ನು ಗಮನಿಸಿ ಕೊಟ್ಟಿರುವ ಪದಗಳಿಂದ ವಾಕ್ಯ ರಚಿಸುವೆಯಾ?**



1. ಹಸು : ______________________________

2. ಮಹಿಳೆ : ______________________________

3. ಗುಡಿಸಲು : ______________________________

4. ಬೆಟ್ಟ : ______________________________

5. ಹಾಲು : ______________________________

**2.ಎ. ಕೊಟ್ಟಿರುವ ವಾಕ್ಯದಲ್ಲಿನ ಚಿತ್ರ ಗಮನಿಸಿ ಕೆಳಗಿನ ಸಾಲಿನಲ್ಲಿ ಪೂರ್ಣ ವಾಕ್ಯ ಬರೆಯುತ್ತೀರಾ ?**

1. ಮಾವಿನ ಮರದಲ್ಲಿ  ಯು ಕುಳಿತಿದೆ

______________________________

2.  ವು ಜ್ಞಾನದ ಸಂಕೇತವಾಗಿದೆ

______________________________

3. ಬೆಂಗಳೂರಿನಿಂದ  ಶಿವಮೊಗ್ಗಕ್ಕೆ ಹೊರಟಿದೆ

______________________________

4.  ಕೊಳದಲ್ಲಿ ಈಜುತ್ತಿದೆ

______________________________

5. ದೇವಾಲಯದ  ಎತ್ತರವಾಗಿದೆ

______________________________





## 2.ಏ. ಪದಗಳನ್ನು ಓದುತ್ತಾ ಪಕ್ಕದಲ್ಲಿ ಬರೆಯುವಿರಾ ?

| ತ್ತ | | ನ್ನ | | ಮ್ಮ | | ಲ್ಲ | |
|---|---|---|---|---|---|---|---|
| ಅತ್ತ | | ಅನ್ನ | | ಅಮ್ಮ | | ಅಲ್ಲ | |
| ಭತ್ತ | | ಚಿನ್ನ | | ತಮ್ಮ | | ಬೆಲ್ಲ | |
| ಕತ್ತಲು | | ಕನ್ನಡ | | ಕೆಮ್ಮು | | ಎಲ್ಲಾ | |
| ಬತ್ತಾಸು | | ತೆನ್ನಾಲಿ | | ಚಮ್ಮಾರ | | ರಸಗುಲ್ಲಾ | |
| ಹಿತ್ತಾಳೆ | | ಕುನ್ನಿ | | ಕಮ್ಮಾರ | | ಚೆಲ್ಲಾಟ | |
| ಕತ್ತಿ | | ಬನ್ನಿ | | ಕಮ್ಮಿ | | ಎಲ್ಲಿ | |
| ಅತ್ತಿಗೆ | | ನಿನ್ನನ್ನು | | ನಿಮ್ಮ | | ಇಲ್ಲಿ | |
| ಮಹತ್ತು | | ತಿನ್ನು | | ದಮ್ಮು | | ನಲ್ಲಿ | |
| ಹತ್ತು | | ಬೆನ್ನು | | ಎಮ್ಮೆ | | ಅಲ್ಲಿ | |
| ಹೊತ್ತು | | ಇನ್ನೂರು | | ನಮ್ಮೆಲ್ಲರ | | ಹಲ್ಲಿ | |

**2.ಐ. ಆಲೋಚಿಸುತ್ತಾ ಬಿಟ್ಟ ಸ್ಥಳದಲ್ಲಿ ಸೂಕ್ತ ಪದ ಬರೆಯುವಿರಾ ?**



1. ನಾನು.................ಯಲ್ಲಿ .................... ನೋಡಿದೆ.

2. ಬೆಂಗಳೂರಿನಿಂದ .........................ನಲ್ಲಿ ಮಂಗಳೂರಿಗೆ ಬಂದೆನು.

3. ಅಮ್ಮನು ಮಾಡಿದ ..................... ಈ ತಿನಿಸು ನನಗಿಷ್ಟ

4. ನಿಂಬೆಹಣ್ಣಿನ ಶರಬತ್ತಿನಲ್ಲಿ ............, ..............., ............ ಮತ್ತು

................... ಹಾಕಿ ತಯಾರಿಸುವರು.

5. ಬಿಲದೊಳಗೆ ............. ನುಗ್ಗಿತು.

**2.ಒ. ಸೂಕ್ತ ಒತ್ತಕ್ಷರವನ್ನು ಆರಿಸಿ ಬಿಟ್ಟ ಸ್ಥಳದಲ್ಲಿ ಬರೆಯುವಿರಾ?**

ಹು...........

ಹೆ............ಗಿ

ಮು............ತು

ಮ...........

ಹ...........



**2.ಓ. ನನ್ನನ್ನು ಒತ್ತಕ್ಷರವಾಗಿ ಹೊಂದಿರುವ ಪದಗಳನ್ನು ಹುಡುಕಿ ಗೆರೆ ಹಾಕುವಿರಾ?**

ಭವ್ಯ

ಹಾಸ್ಯ

ಕಷ್ಟ

ಶತ್ರು

ಲ

ಅತ್ಯಂತ

ಪತ್ರ

ಕ್ಷೇಮ

ಸ್ಥಳ

ರ

ಶತ್ರು

ಪ್ರೀತಿ

ಕಸ್ತೂರಿ

**2.ಔ. ನಮ್ಮನ್ನು ಓದುತ್ತಾ ಬರೆಯುವಿರಾ.. ?**



1. ನಮಸ್ಕಾರ ______
2. ನಿಲ್ದಾಣ ______
3. ಸದ್ಭಾವ ______
4. ಪ್ರಾಥಮಿಕ ______
5. ಪಶ್ಚಿಮ ______
6. ಶಕ್ತಿ ______
7. ಪಕ್ಷಿ ______
8. ಷಷ್ಠಿ ______
9. ಸ್ತ್ರೀಯರು ______
10. ಸ್ವೀಕಾರ ______
11. ಕಾಶ್ಮೀರ ______
12. ನಾಲ್ಕು ______
13. ವಸ್ತು ______
14. ಭಿಕ್ಷುಕ ______
15. ಸುಸ್ತು ______
16. ಅತ್ಯಂತ ______
17. ಬೀಳ್ಕೊಡುಗೆ ______
18. ಕಸ್ತೂರಿ ______
19. ಸ್ಕೂಟರ್ ______
20. ಪರೀಕ್ಷೆ ______
21. ಆಸ್ಪತ್ರೆ ______
22. ಸ್ನೇಹ ______
23. ಕ್ಷೇಮ ______
24. ಸಂಕ್ರಾಂತಿ ______

3. ಈ ಕಥೆಯನ್ನು ಓದಿ, ವಾಕ್ಯಗಳಲ್ಲಿರುವ ಸಜಾತಿಯ ಒತ್ತಕ್ಷರಗಳನ್ನು ಪತ್ತೆ ಹಚ್ಚುವಿರಾ ?

## ಮಲ್ಲಿಗೆ ಹೂ



ಶಾಲೆಯ ಪಕ್ಕ ಜಾಗ ಖಾಲಿ ಇತ್ತು. ಲಚ್ಚಿ ಅಲ್ಲಿ ಮಲ್ಲಿಗೆ ಬಳ್ಳಿ ನೆಟ್ಟಳು. ಲಚ್ಚಿಯ ತಮ್ಮ ಸುಬ್ಬ ಬಳ್ಳಿಗೆ ದಿನವೂ ನೀರು ಹಾಕುತ್ತಿದ್ದ. ಬಳ್ಳಿ ಬೆಳೆಯಿತು. ಮೊಗ್ಗು ಮೂಡಿತು. ಮೊಗ್ಗು ಅರಳಿ ಹೂವಾಯಿತು. ಹಸಿರು ಬಳ್ಳಿಯ ತುಂಬ ಮಲ್ಲಿಗೆ ಹೂವೋ ಹೂವು! ಲಚ್ಚಿ ಮನಸ್ಸಿನಲ್ಲೇ ಹಿಗ್ಗಿದಳು. ಶಾಲೆಯ ದೊಡ್ಡ ಗುರುಗಳೂ ಮೆಚ್ಚಿದರು. ಬಳ್ಳಿಯಿಂದ ಯಾರೂ ಹೂ ಕುಯ್ಯಬಾರದೆಂದು ಅಪ್ಪಣೆ ಮಾಡಿದರು. ಲಚ್ಚಿಗೆ ಆಸೆ ತಡೆಯಲು ಆಗಲಿಲ್ಲ. ಸಂಜೆ ಒಬ್ಬಳೇ ಬಂದು ಹೂ ಕಿತ್ತೇ ಬಿಟ್ಟಳು. ಸರ್ರನೆ ಮಲ್ಲಿಗೆ ಹಾರ ಕಟ್ಟಿದಳು. ತನ್ನ ಅವ್ವನಿಗೆ ಕೊಟ್ಟಳು. ಸುಬ್ಬ ಬಂದು ಅವ್ವನಿಗೆ ಗುರುಗಳ ಅಪ್ಪಣೆಯ ವಿವರ ಹೇಳಿದ. ಆಗ ಅವ್ವ ಲಚ್ಚಿಗೆ ‘‘ನೀನು ಮಾಡಿದ್ದು ಸರಿಯೇ ? ಕದ್ದ ಹೂವಿನ ಹಾರ ನನಗೆ ಬೇಡ ಎಂದು ಬಿಟ್ಟಳು. ಲಚ್ಚಿ ಉಹ್ಹುಹ್ಹೂ....... ಎಂದು ಸಣ್ಣ ದನಿಯಲ್ಲಿ ಅಳತೊಡಗಿದಳು.

ಅಜ್ಜ ಬಂದು ‘ಲಚ್ಚಿ, ಲಜ್ಜೆ ಬಿಟ್ಟು ಗುರುಗಳ ಬಳಿ ನಿನ್ನ ತಪ್ಪು ಒಪ್ಪಿಕೊ; ಈ ಮಲ್ಲಿಗೆ ಹಾರ ಗುರುಗಳಿಗೇ ಕೊಡು ಎಂದು ಸಮಾಧಾನ ಮಾಡಿದರು.

''ಮಲ್ಲಿಗೆ ಹೂ'' ಕಥೆಯ ವಾಕ್ಯಗಳಲ್ಲಿರುವ ಸಜಾತಿಯ ಒತ್ತಕ್ಷರಗಳನ್ನು ಪಟ್ಟಿ ಮಾಡುವಿರಾ ?

| ಕ್ರಸಂ. | ಒತ್ತಕ್ಷರ ಪದ | ಒತ್ತಕ್ಷರ | ಕ್ರಸಂ. | ಒತ್ತಕ್ಷರ ಪದ | ಒತ್ತಕ್ಷರ |
|---|---|---|---|---|---|
| 1 | ಉದಾ : ಇತ್ತು | ತ್ತು | 11 | | |
| 2 | | | 12 | | |
| 3 | | | 13 | | |
| 4 | | | 14 | | |
| 5 | | | 15 | | |
| 6 | | | 16 | | |
| 7 | | | 17 | | |
| 8 | | | 18 | | |
| 9 | | | 19 | | |
| 10 | | | 20 | | |

## ಹಕ್ಕಿ ಗೂಡು

ರಾಜಣ್ಣ ತಂಗಿಯೊಡನೆ ಹಗ್ಗದ ಆಟ ಆಡುತ್ತಿದ್ದ. ಹಗ್ಗ ಹಳ್ಳಕ್ಕೆ ಬಿದ್ದು ಹೋಯಿತು. ಆಟ ನಿಂತಿತು. ಇಬ್ಬರೂ ಪಕ್ಕದ ಗಿಡದ ಬಳಿ ಒಂದು ಕರ್ರನೆ ಹಕ್ಕಿ ನೋಡಿದರು. ಸದ್ದು ಮಾಡದೆ ನಿಂತು ಅದು ಗೂಡು ಕಟ್ಟುವುದನ್ನು ನೋಡಿದರು. ಚಿಕ್ಕ-ಪುಟ್ಟ ಕಡ್ಡಿ ತಂದು ಜೋಡಿಸಿತ್ತು. ಮೆತ್ತಗಿರುವ ಎಲೆ ತಂದು ಗೂಡಿಗೆ ಹಾಸುತ್ತಿತ್ತು. ಆ ವೇಳೆಗೆ ಗೆಳೆಯ ಬಸವಯ್ಯ ಬಂದನು. ಮೂವರು ಕಣ್ಣು ಮುಚ್ಚಾಲೆ ಆಟ ಆಡಿದರು. ಕುಣಿದು ಕುಪ್ಪಳಿಸಿದರು. ಆಗ ಪೇಟೆಯಿಂದ ಬಸ್ಸಿನಲ್ಲಿ ಅಜ್ಜ, ಅವ್ವ, ಅಮ್ಮ ಬಂದರು. ಓಹ್ಹೋಹ್ಹೋ...! ಎಂದು ಆಟ ನಿಲ್ಲಿಸಿ ಮನೆಗೆ ನಡೆದರು.

**3.ಅ. ಹಕ್ಕಿಗೂಡು ಕಥೆಯಲ್ಲಿ ಬರುವ 20 ಸಜಾತಿಯ ಒತ್ತಕ್ಷರ ಪದಗಳನ್ನು ಗುರುತಿಸಿ ಪಟ್ಟಿ ಮಾಡಬಲ್ಲಿರಾ ?**

| ಕ್ರಸಂ. | ಒತ್ತಕ್ಷರ ಪದ | ಒತ್ತಕ್ಷರ ಬಿಡಿಸಿ ಬರೆಯಿರಿ | ಕ್ರಸಂ. | ಒತ್ತಕ್ಷರ ಪದ | ಒತ್ತಕ್ಷರ ಬಿಡಿಸಿ ಬರೆಯಿರಿ |
|---|---|---|---|---|---|
| 1 | ಉದಾ:ರಾಜಣ್ಣ | ಣ್+ಣ್+ಆ | 11 | | |
| 2 | | | 12 | | |
| 3 | | | 13 | | |
| 4 | | | 14 | | |
| 5 | | | 15 | | |
| 6 | | | 16 | | |
| 7 | | | 17 | | |
| 8 | | | 18 | | |
| 9 | | | 19 | | |
| 10 | | | 20 | | |

**3.ಆ. ವಿಜಾತಿ ಒತ್ತಕ್ಷರ ಪದಗಳನ್ನು ಓದುತ್ತಾ ಈ ಕೆಳಗೆ ಬರೆಯುವೆಯಾ ?**

| | | | |
|---|---|---|---|
| ಅಕ್ಷತೆ | ಸ್ವರಾಜ್ಯ | ಪುರಸ್ಕಾರ | ವಿಜ್ಞಾನ |
| ನಕ್ಷತ್ರ | ಆಶ್ಚರ್ಯ | ಜಗದ್ಗುರು | ಶಾಸ್ತ್ರ |
| ವಸ್ತು | ಅಧ್ಯಕ್ಷ | ಬ್ರಹ್ಮಚಾರಿ | ಅಗಸ್ತ್ಯ |
| ಲಕ್ಷ್ಮಿ | ಚೀತ್ಕಾರ | ಬ್ರಾಹ್ಮಣ | ಸ್ವಾತಂತ್ರ್ಯ |
| ಪ್ರತಿಜ್ಞೆ | ಸದ್ಗುರು | ಕಲ್ಪವೃಕ್ಷ | ಉಷ್ಟ್ರಪಕ್ಷಿ |
| ಸೂಕ್ಷ್ಮ | ತೀಕ್ಷ್ಣ | ಮಧ್ಯಾಹ್ನ | ರಾಷ್ಟ್ರಪತಿ |
| ದಕ್ಷಿಣ | ತಿರಸ್ಕಾರ | ಚಿಹ್ನೆ | ಸೂಕ್ತ |
| ಪ್ರತ್ಯಕ್ಷ | ಫಾಲ್ಗುಣ | ನಮಸ್ಕಾರ | ದ್ರಾಕ್ಷಿ |

| | | | |
|---|---|---|---|
| | | | |
| | | | |
| | | | |
| | | | |
| | | | |
| | | | |
| | | | |
| | | | |

# ನಾನೆಷ್ಟು ಕಲಿತಿರುವೆ - 1

**1. ಮಾದರಿಯಂತೆ ಬಿಡಿಸಿ ಬರೆಯಬಲ್ಲಿರಾ ?**

ಮಾದರಿ : ಅಕ್ಕ = ಅ+ಕ್+ಕ್+ಅ

1. ಅಪ್ಪ = ____________________
2. ಚಿನ್ನ = ____________________
3. ಹಗ್ಗ = ____________________
4. ಹಬ್ಬ = ____________________
5. ಕಣ್ಣು = ____________________

**2. ವಿಂಗಡಿಸಿ ಬರೆಯಬಲ್ಲಿರಾ ?**

ಮನ್ನಣೆ ಚಕ್ಕುಲಿ

ಪ್ರಶ್ನೆ ಮೊಟ್ಟೆ ಗದ್ದಲ

ಭವ್ಯ ಈಶ್ವರ ಕೃಷಿ

ಸೊಳ್ಳೆ ಅಕ್ಷತೆ ಸ್ಥಳ

ದೃಷ್ಟಿ ತಪಸ್ಸು

| ಕ್ರ.ಸಂ. | ಸಜಾತಿ ಒತ್ತಕ್ಷರ ಪದಗಳು | ವಿಜಾತಿಯ ಒತ್ತಕ್ಷರ ಪದಗಳು |
|---|---|---|
| **1** | | |
| **2** | | |
| **3** | | |
| **4** | | |
| **5** | | |
| **6** | | |

**3. ಮಾದರಿಯಂತೆ ಕೂಡಿಸಿ ಬರೆಯುವಿರಾ ?**

ಮಾದರಿ : ಕ್+ಕ್+ಅ=ಕ್ಕ

1. ಲ್+ಲ್+ಇ = ______________________
2. ಮ್+ಮ್+ಆ = ______________________
3. ಯ್+ಯ್+ಅ = ______________________
4. ನ್+ನ್+ಅ = ______________________
5. ತ್+ತ್+ಆ = ______________________

**4. ಬಿಟ್ಟ ಸ್ಥಳ ತುಂಬ ಬಲ್ಲಿರಾ ?**

| ಗ್ಗ | ಕ್ಕಿ | ಟ್ಟ | ಮ್ಮಾ | ಚ್ಚಿ |
|---|---|---|---|---|

1. ಪ__ಣ
4, ಮು__ತು
2. ಹೆ__ಣ
5. ಕ__ ರ
3. ನೆ—ತು

**5. ಪದ ರಚಿಸುವಿರಾ ?**

ಅ

ನ್ನ
ಮ್ಮ
ಯ್ಯ
ಜ್ಜ
ಚ್ಚ

1 ____________________

2 ____________________

3 ____________________

4 ____________________

5 ____________________

## ಅಭ್ಯಾಸ - 2

1. ಚಿತ್ರ ನೋಡಿ ಪದ ಬರೆಯುವಿರಾ ?



**1.ಅ. ಈ ವಾಕ್ಯಗಳಲ್ಲಿನ ಅಡಿಗೆರೆ ಎಳೆದ ಪದಗಳನ್ನು ಮಾದರಿಯಂತೆ ಕೋಷ್ಟಕದಲ್ಲಿ ಬರೆಯುವಿರಾ ?**

1. ಆನೆ ಒಂದು ಕಾಡು**ಪ್ರಾಣಿ.** ಹಾಗೆಯೇ ಉಳಿದ **ಪ್ರಾಣಿಗಳು** ಕಾಡಿನಲ್ಲಿ ವಾಸವಾಗಿವೆ.

2. ನಮ್ಮ ಶಾಲೆಯಲ್ಲಿ ಮಾವಿನ **ಮರ**ವಿದೆ, ಅಲ್ಲದೆ ಬೇರೆ ಬೇರೆ ಜಾತಿಯ **ಮರಗಳು** ಇವೆ.

3. ರಾಮು ಒಂದು ಬಾಳೆ**ಹಣ್ಣು** ತಿಂದಮೇಲೆ, ಇನ್ನೂ ಕೆಲವು **ಹಣ್ಣುಗಳು** ಉಳಿದಿವೆ.

4. ಧೋನಿ ಭಾರತ ಕ್ರಿಕೆಟ್ ತಂಡದ **ನಾಯಕ.** ಈ ಹಿಂದೆ ಅನೇಕ **ನಾಯಕರು** ಭಾರತ ತಂಡವನ್ನು ಮುನ್ನಡೆಸಿದ್ದಾರೆ.

5. ನನಗೆ ಚೇತನ್ ಒಬ್ಬನೇ **ತಮ್ಮ.** ನನ್ನ ಸ್ನೇಹಿತನಿಗೆ ಶಶಿ, ಕಿರಣ ಇಬ್ಬರು **ತಮ್ಮಂದಿರು.**

6. ಬಿಳಿಯ **ಬಣ್ಣ** ಏಳು **ಬಣ್ಣಗಳು** ಸೇರಿ ಆಗಿದೆ.

7. ಅಂಚೆಯಣ್ಣ ನನಗೆ **ಪತ್ರ** ಕೊಟ್ಟ ನಂತರವೂ ಅವನ ಬಳಿ **ಪತ್ರಗಳು** ಇದ್ದವು.

8. ಮಲ್ಲಣ್ಣ ಉತ್ತಮ **ರೈತ.** ರಾಮಪುರ ಊರಿನ **ರೈತರು** ಮಲ್ಲಣ್ಣನ ಸಹಾಯ ಕೇಳುತ್ತಿದ್ದರು.

9. ಮಲೆನಾಡಿನಲ್ಲಿ ಸಹ್ಯಾದ್ರಿ **ಬೆಟ್ಟ** ದೊಂದಿಗೆ ಉಳಿದ **ಬೆಟ್ಟಗಳು** ಹಬ್ಬಿ ನಿಂತಿವೆ.

10. ರಾಹುಲ್ ಆದರ್ಶ **ವಿದ್ಯಾರ್ಥಿ.** ಶಾಲೆಯ ಉಳಿದ **ವಿದ್ಯಾರ್ಥಿಗಳು** ರಾಹುಲ್‌ಗೆ ಆತ್ಮೀಯರು.

| ಮಾದರಿ : | ಪ್ರಾಣಿ | ಪ್ರಾಣಿಗಳು | 6 | | |
|---|---|---|---|---|---|
| 2 | | | 7 | | |
| 3 | | | 8 | | |
| 4 | | | 9 | | |
| 5 | | | 10 | | |

ಇಲ್ಲಿ ವಿಂಗಡಿಸಿ ಬರೆದಿರುವ ಪದಗಳನ್ನು ಗಮನಿಸಿ.
ಇವುಗಳು ಏನೆಂಬುದನ್ನು ಗೆಳೆಯರೊಂದಿಗೆ ಚರ್ಚಿಸಿ ತಿಳಿದುಕೊಳ್ಳಿ.

**1.ಆ. ಹೊಂದಿಸಿ ಬರೆಯುವಿರಾ ?**

| | | | |
|---|---|---|---|
| 1. | ಕಡ್ಡಿ | ಚಿಂತಕರು | 1)................................................ |
| 2. | ವಿಜ್ಞಾನಿ | ಕಟ್ಟಡಗಳು | 2)................................................ |
| 3. | ಸೀರೆ | ಕಡ್ಡಿಗಳು | 3)................................................ |
| 4. | ಮಗು | ನದಿಗಳು | 4)................................................ |
| 5. | ಕಟ್ಟಡ | ಸೀರೆಗಳು | 5)................................................ |
| 6. | ನದಿ | ವಿಜ್ಞಾನಿಗಳು | 6)................................................ |
| 7. | ಚಿಂತಕ | ಮಕ್ಕಳು | 7)................................................ |

**1.ಇ. ಮಾದರಿಯಂತೆ ಬರೆಯುವಿರಾ ?**

**ಮಾದರಿ : ಕಿವಿ - ಕಿವಿಗಳು**

1. ಬೆರಳು – ..........................

2. ಕಲ್ಲು – ............................

3. ಬಟ್ಟೆ – ............................

4. ಸರ – ............................

5. ಲೇಖನಿ – ..........................

**1.ಈ. ಮಾದರಿಯಂತೆ ಬರೆಯುವಿರಾ ?**

| | | |
|---|---|---|
| 1. ತಮ್ಮ | ಅಂದಿರು | ತಮ್ಮಂದಿರು |
| 2. ಅಕ್ಕ | | |
| 3. ಅಮ್ಮ | | |
| 4. ಅಪ್ಪ | | |
| 5. ಅಜ್ಜ | | |
| 6. ಅಣ್ಣ | | |

**1.ಉ. ಮಾದರಿ : ಬಳ್ಳಿಗಳು - ಬಳ್ಳಿ**

1 ಗುಡಿಗಳು .............................

2 ದನಗಳು .............................

3 ಕಾಡುಗಳು ...........................

4 ರೊಟ್ಟಿಗಳು ...........................

**1.ಊ. ಮಾದರಿಯಂತೆ ವಿಂಗಡಿಸಿ ಬರೆಯಬಲ್ಲಿರಾ ?**



| | |
|---|---|
| ಮಾದರಿ : 1) ಹಲ್ಲು | ಹಲ್ಲುಗಳು |
| 2) | |
| 3) | |
| 4) | |
| 5) | |
| 6) | |
| 7) | |
| 8) | |



## 2. ಚಿತ್ರಗಳನ್ನು ಗುರುತಿಸಿ ಪದಗಳನ್ನು ಬರೆಯುವಿರಾ ?













ಪದಗಳನ್ನು ಬರೆಯಿರಿ :



ಪದಗಳನ್ನು ಬರೆಯಿರಿ :







## 2.ಅ. ವಿಂಗಡಿಸಿ ಬರೆಯುವಿರಾ?




| ಮಾದರಿ : ಗಂಡು | ಹೆಣ್ಣು | ಮಗು |
|---|---|---|
| | | |
| | | |
| | | |
| | | |
| | | |

ಮಕ್ಕಳೇ ಈ ಚಟುವಟಿಕೆಯಲ್ಲಿ ನೀವು ವಿಂಗಡಿಸಿ ಬರೆದಿರುವ ಪದಗಳ ಬಗ್ಗೆ ಈಗಾಗಲೇ ತಿಳಿದಿರುವಿರಿ. ಇದನ್ನು ಗೆಳೆಯರೊಂದಿಗೆ ಚರ್ಚಿಸಿ ತಿಳಿದುಕೊಳ್ಳಿ.

**2.ಆ. ಲಿಂಗ ಬದಲಿಸಿ ಬರೆಯಬಲ್ಲಿರಾ ?**

1. ಗಾಯಕ = ......................................

2. ನಟ = ............................................

3. ತಮ್ಮ = ............................................

4. ಸಹೋದರ = ....................................

5. ದೊಡ್ಡಪ್ಪ = ........................................

**2.ಇ. ಮಾದರಿಯಂತೆ ವಾಕ್ಯಗಳನ್ನು ಬದಲಿಸಿ ಬರೆಯುವಿರಾ ?**

ಮಾದರಿ: 1. **ಅಮ್ಮ** ದೇವಾಲಯಕ್ಕೆ ಹೋದರು

**ಅಪ್ಪ** ದೇವಾಲಯಕ್ಕೆ ಹೋದರು

2. **ಬಾಲಕರು** ಪಥಸಂಚಲನದಲ್ಲಿ ಭಾಗವಹಿಸಿದರು.

___________________________________________

3. **ಶಿಕ್ಷಕರು** ಮಕ್ಕಳೊಂದಿಗೆ ಪ್ರವಾಸದಲ್ಲಿ ಪಾಲ್ಗೊಂಡರು

___________________________________________

4. **ಅಜ್ಜಿಯು** ಮಾರುಕಟ್ಟೆಯಿಂದ ಹಣ್ಣುಗಳನ್ನು ತಂದರು.

___________________________________________

5. ಚಲನಚಿತ್ರದಲ್ಲಿ **ನಾಯಕನ** ಪಾತ್ರ ಪ್ರಮುಖವಾಗಿದೆ.

___________________________________________

# ನಾನೆಷ್ಟು ಕಲಿತಿರುವೆ - 2

**1. ಮಾದರಿಯಂತೆ ಬರೆಯಬಲ್ಲಿರಾ ?**

ಮಾದರಿ : ದೇಶ+ಗಳು = ದೇಶಗಳು

1. ಗೊಂಬೆ + ............................ = ............................

2. ಸಂಖ್ಯೆ + ............................ = ............................

3. ಕಾಯಿ + ............................ = ............................

4. ಹಣ್ಣು + ............................ = ............................

5. ರೊಟ್ಟಿ + ............................ = ............................

ಮಾದರಿ : ಅಣ್ಣ + ಅಂದಿರು = ಅಣ್ಣಂದಿರು

1. ತಾಯಿ + ............................ = ............................

2. ತಮ್ಮ + ............................ = ............................

3. ಮಾವ + ............................ = ............................

4. ಅಜ್ಜಿ + ............................ = ............................

5. ಅಕ್ಕ + ............................ = ............................

**2. ಬಹುವಚನ ರೂಪ ಬರೆಯುವಿರಾ ?**

1. ಸರ – ............................
2. ಬಟ್ಟೆ – ............................
3. ತಾತ – ............................
4. ಚಿಕ್ಕಪ್ಪ – ............................
5. ಬೆರಳು – ............................
6. ಕಿವಿ – ............................



**3. ಏಕವಚನ ರೂಪ ಬರೆಯುವಿರಾ ?**

1. ಪುಸ್ತಕಗಳು – ............................
2. ದನಗಳು – ............................
3. ಗುಡಿಗಳು – ............................
4. ಬಾಗಿಲುಗಳು – ............................
5. ಕಣ್ಣುಗಳು – ............................

**4. ಲಿಂಗ ಬದಲಿಸಿ ಬರೆಯುವಿರಾ ?**

1. ಚಿಕ್ಕಪ್ಪ – .............................
2. ತಂಗಿ – .............................
3. ನಾಯಕಿ – .............................
4. ಸಹೋದರ – .............................
5. ಶಿಕ್ಷಕ – .............................
6. ಪಾಲಕ – .............................

**5. ಸೂಚನೆಯಂತೆ ಬರೆಯುವಿರಾ ?**

| ವ್ಯಕ್ತಿಗಳು | ವಸ್ತುಗಳು | ಸ್ಥಳ | ಪ್ರಾಣಿ/ಪಕ್ಷಿ |
|---|---|---|---|
| ರಾಮ | ಕಲ್ಲು | ಬೆಂಗಳೂರು | ಪಾರಿವಾಳ |
| | | | |
| | | | |
| | | | |
| | | | |

ಇವುಗಳನ್ನು ಏನೆನ್ನುವರು ಎಂಬುದು ತಿಳಿಯಲು ನಿಮ್ಮ ಶಿಕ್ಷಕರೊಂದಿಗೆ ಮತ್ತು ಗೆಳೆಯರೊಂದಿಗೆ ಚರ್ಚಿಸಿ.

6. ಈ ಬಿತ್ತಿಪತ್ರಗಳು ಏನು ಹೇಳುತ್ತವೆ ಬರೆಯುವಿರಾ ?



ನೇತ್ರದಾನ - ಮಹಾದಾನ

**ನೇತ್ರದಾನ ಅಂಧರ ಬಾಳಿಗೆ ಬೆಳಕು ತರುತ್ತದೆ. ಸಮೀಪದ ನೇತ್ರಬ್ಯಾಂಕಿನಲ್ಲಿ ಇಂದೇ ನಿಮ್ಮ ಹೆಸರು ನೋಂದಾಯಿಸಿ.**

ಪಲ್ಸ್ ಪೋಲಿಯೋ ಲಸಿಕೆ
6ನೇ ಡಿಸೆಂಬರ್ 1995
ಮತ್ತು
10ನೇ ಜನವರಿ 1996



ಪೋಲಿಯೋ ಮುಕ್ತ ಪ್ರಪಂಚವಾಗಲಿ. ಮೂರು ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ನಿಗದಿಪಡಿಸಿದ ದಿನಗಳಂದು ಪೋಲಿಯೋ ಲಸಿಕೆ ಕೊಡಿಸಿ.

7. ಚಿತ್ರವನ್ನು ಗಮನಿಸಿ ವಾಕ್ಯಗಳನ್ನು ಸರಿಪಡಿಸುವಿರಾ.. ?

1. 

ಹುಡುಗಿ ಶಾಲೆಗೆ ಹೋಗುತ್ತಿದ್ದಾಳೆ

______________________

2. 

ಪುಟ್ಟ ಹಗ್ಗ ಆಡುತ್ತಿದ್ದಾನೆ

______________________

3. 

ರಾಣಿಯು ಕುದುರೆ ಏರಿದಳು

______________________

4. 

ಹುಡುಗಿಯರು ಕುಳಿತು ಓದುತ್ತಿದ್ದಾರೆ

______________________

5. 

ಅವರು ಬಸ್ಸು ಹತ್ತುತ್ತಿದ್ದಾಳೆ.

______________________

# ಪದ ಸಂಪತ್ತು

ಅಂಬುಧಿ - ಕಡಲು, ಸಮುದ್ರ
ಅರಸ - ರಾಜ, ದೊರೆ
ದರ - ಬೆಲೆ, ಮೌಲ್ಯ
ಕದನ - ಯುದ್ಧ, ಸಮರ
ಸಲಗ - ಆನೆ, ಗಜ, ಕರಿ
ಉರಗ - ಹಾವು, ನಾಗರ
ಶತಕ - ನೂರು
ದಶಕ - ಹತ್ತು
ಜಯ - ಗೆಲುವು
ಪಯಣ - ಪ್ರಯಾಣ
ಖಗ - ಪಕ್ಷಿ, ಹಕ್ಕಿ
ನಖ - ಉಗುರು
ಧನ - ಹಣ ಸಂಪತ್ತು
ಫಲ - ಹಣ್ಣು
ನಯನ - ಕಣ್ಣು
ವನ - ಕಾಡು, ಅರಣ್ಯ, ಕಾನನ
ವದನ - ಮುಖ
ದಡ - ತೀರ
ಪವನ - ಗಾಳಿ, ವಾಯು
ಜಯ - ಗೆಲುವು
ಆಲಯ - ಮನೆ
ಜಳಕ - ಸ್ನಾನ

ಕರ - ಕೈ
ಗಗನ - ಆಕಾಶ
ಶರ - ಬಾಣ
ನಗ - ಹಣ
ಸಂಕಟ - ಕಷ್ಟ
ಕಾದಾಟ - ಜಗಳ
ಜಾಣ - ಬುದ್ದಿವಂತ
ತಾಣ - ಸ್ಥಳ
ನಾಮ - ಹೆಸರು
ಯಾನ - ಪ್ರಯಾಣ
ಕಿಸೆ - ಜೇಬು
ಛಾಯ - ನೆರಳು
ಉಪವಾಸ - ನಿರಶನ
ನುಣುಪು - ನಯವಾದ
ವಧು- ಮದುವೆಯ ಹೆಣ್ಣು
ಮೃಗ - ಪ್ರಾಣಿ
ಸೂರ್ಯ – ಭಾನು, ನೇಸರು
ಚಂದ್ರ – ಶಶಿ, ತಿಂಗಳು
ಭೂಮಿ – ಭುವಿ, ಪೃಥ್ವಿ
ಸುಮ – ಹೂ
ಹಸು – ಆಕಳು, ನಂದಿನಿ
ಕೋತಿ – ಮಂಗ, ಮರ್ಕಟ

## ಮಹಾ ಸಾಧನೆ

1. ವಿದ್ಯಾರ್ಥಿಯ ಹೆಸರು : ____________________

2. ತರಗತಿ ______ ವಿಭಾಗ ____________ ಹಾಜರಿ ಸಂಖ್ಯೆ : ____________

| ಕ್ರ. ಸಂ. | ನನ್ನ ಸಾಧನೆ | (ವಿದ್ಯಾರ್ಥಿಗಾಗಿ) ಪೂರ್ಣಗೊಳಿಸಿದ ನನ್ನ ಸಾಧನೆಯ ನಂತರ ಗುರುತು ಹಾಕುವುದು | (ಶಿಕ್ಷಕರಿಗಾಗಿ) ಅತ್ಯುತ್ತಮ : 3 ನಕ್ಷತ್ರಗಳು ಉತ್ತಮ : 2 ನಕ್ಷತ್ರಗಳು ಸಾಧಾರಣ : 1 ನಕ್ಷತ್ರಗಳು | ತರಗತಿ ಶಿಕ್ಷಕರ ಸಹಿ | ಮುಖ್ಯೋಪಾಧ್ಯಾಯರ ಸಹಿ |
|---|---|---|---|---|---|
| **1.** | **ಪುನರಾವರ್ತನೆ** | | | | |
| **2.** | **ಸೇತುಬಂಧ** | | | | |
| **3.** | **ನಾನೆಷ್ಟು ಕಲಿತಿರುವೆ -1** | | | | |
| **4.** | **ನಾನೆಷ್ಟು ಕಲಿತಿರುವೆ -2** | | | | |